# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1125

ಸದಸ್ಯರ ಹೆಸರು : ಶ್ರೀ ಕೆ.ಸಿ.ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 20-12-2018

ಉತ್ತರಿಸುವ ಸಚಿವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಈ ಸಾಲಿನಲ್ಲಿ ಬಳ್ಳಾರಿ ಜಿಲ್ಲೆ ಹಂಪಿಯಲ್ಲಿ ಪ್ರತಿ ವರ್ಷದಂತೆ ಹಂಪಿ ಉತ್ಸವವನ್ನು ಆಚರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | 2018-19ನೇ ಸಾಲಿನ ಇಲಾಖಾ ಕ್ರಿಯಾ ಯೋಜನೆಯಲ್ಲಿ ಹಂಪಿ ಉತ್ಸವ ಆಚರಣೆಗಾಗಿ ರೂ.60.00ಲಕ್ಷಗಳ ಅನುದಾನದ ಅವಕಾಶವನ್ನು ಮಾಡಿಕೊಳ್ಳಲಾಗಿದೆ. ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಇವರು ಹಂಪಿ ಉತ್ಸವಕ್ಕಾಗಿ ರೂ.8.00ಕೋಟಿಗಳ ಅನುದಾನ ಬಿಡುಗಡೆ ಮಾಡುವಂತೆ ಮನವಿ ಸಲ್ಲಿಸಿದ್ದು, ಸದರಿ ಮನವಿಯ ಮೇರೆಗೆ ಬಾಕಿ ಉಳಿಕೆ ಅನುದಾನ ರೂ.7.40ಕೋಟಿಯನ್ನು ಹೆಚ್ಚುವರಿಯಾಗಿ ಒದಗಿಸುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿದೆ. |
| ಆ. | ಜಿಲ್ಲೆಯ ಸುಮಾರು 8 ತಾಲೂಕುಗಳು ಬರ ಪರಿಸ್ಥಿತಿಯನ್ನು ಎದುರಿಸುತ್ತಿದ್ದು, ಜನರು ಸಂಕಷ್ಟದಲ್ಲಿ ಇರುವಾಗ ಹಂಪಿ ಉತ್ಸವಕ್ಕೆ ಸರ್ಕಾರ ಯಾವ ರೀತಿ ಕ್ರಮ ಕೈಗೊಂಡಿರುತ್ತದೆ; | ಪ್ರಸಕ್ತ ಸಾಲಿನಲ್ಲಿ 2019ರ ಜನವರಿ 12 ಮತ್ತು 13 ರಂದು ಹಂಪಿ ಉತ್ಸವವನ್ನು ಆಚರಿಸಲು ಬಳ್ಳಾರಿ ಜಿಲ್ಲಾಡಳಿತದವರು ತೀರ್ಮಾನಿಸಿರುತ್ತಾರೆ. |
| ಇ. | ಉತ್ಸವವನ್ನು ಮಾಡಲು ನಿರ್ಧರಿಸಿದ್ದೇ ಆದಲ್ಲಿ ಉತ್ಸವಕ್ಕೆ ಎಷ್ಟು ಅನುದಾನವನ್ನು ಹಂಚಿಕೆ ಮಾಡಲಾಗಿದೆ. ಉತ್ಸವಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು; | 2018-19ನೇ ಸಾಲಿನ ಇಲಾಖಾ ಕ್ರಿಯಾ ಯೋಜನೆಯಲ್ಲಿ ಅವಕಾಶ ಮಾಡಿಕೊಂಡಿರುವ ರೂ.60.00 ಲಕ್ಷಗಳ ಅನುದಾನ ಬಿಡುಗಡೆಗೆ ಕ್ರಮ ವಹಿಸಲಾಗಿದೆ. ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಇವರು ರೂ.8.00 ಕೋಟಿ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸಿದ್ದು, ಈ ಸಂಬಂಧ ಉಳಿಕೆ ಮೊತ್ತ ರೂ.7.40ಕೋಟಿಯನ್ನು ಹೆಚ್ಚುವರಿಯಾಗಿ ಒದಗಿಸುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿದೆ. (ಅನುಬಂಧ 01ರಲ್ಲಿ ಅಂದಾಜು ವೆಚ್ಚ ಮಾಹಿತಿ ಲಗತ್ತಿಸಿದೆ.) |
| ಈ. | ಉತ್ಸವದ ರೂಪುರೇಷೆ ಒದಗಿಸುವುದು.? | ಅನುಬಂಧ-2 ರಲ್ಲಿ ಲಗತ್ತಿಸಿದೆ. |

ಸಂಖ್ಯೆ: ಕಸಂವಾ 67 ಕವಿಸ 2018

(ಡಾ. ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಅನುಬಂಧ - 1

| ಹಂಪಿ ಉತ್ಸವ - 2019<br>ಕಲಾವಿದರ ಸಂಭಾವನೆ ಹಾಗೂ ಇತರೆ ಅಂದಾಜು ಪಟ್ಟಿಗಳ ವಿವರ | | |
|---|---|---|
| ಕ್ರಸಂ | ವಿವರ | ಅಂದಾಜು ಮೊತ್ತ |
| 1 | 4 ವೇದಿಕೆಗಳ ಕಲಾವಿದರ ಸಂಭಾವನೆ | 22500000.00 |
| 2 | ಶೋಭಯಾತ್ರೆ , ಜಾನಪದ ವಾಹಿನಿ | 3000000.00 |
| 3 | ಚಿತ್ರಕಲಾ ಶಿಬಿರ / ಪ್ರದರ್ಶನ | 1000000.00 |
| 4 | ಛಾಯಾಚಿತ್ರ ಸ್ಪರ್ಧೆ / ಪ್ರದರ್ಶನ | 250000.00 |
| 5 | ಗೋಡೆಬರಹ ಚಿತ್ರಕಲಾ ಉತ್ಸವ | 500000.00 |
| 6 | ತುಂಗಾ ಆರತಿ ಮಹೋತ್ಸವ | 500000.00 |
| 7 | ಪಾರಂಪರಿಕ ನಡಿಗೆ | 250000.00 |
| 8 | ಸೈಕಲ್ ಜಾಥಾ | 250000.00 |
| 9 | 4 ವೇದಿಕೆಗಳ ವಿನ್ಯಾಸ / ಸ್ವಾಗತ ಕಮಾನ್‌ಗಳು | 2500000.00 |
| 10 | ಹಂಪಿ ಬೈ ಸ್ಕೈ | 250000.00 |
| 11 | ಹಂಪಿ ಬೈ ಬೈಕ್‌ರ್‍ಯಾಲಿ | 250000.00 |
| 12 | ಕೈಗಾರಿಕಾ, ಕೃಷಿ, ಕರಕುಶಲ ಪ್ರದರ್ಶನ / ಆಹಾರ ಮೇಳ/ ಪುಸ್ತಕ ಮೇಳ ಮಳಿಗೆಗಳ [illegible] | 4000000.00 |
| 13 | ರೈತರ ವಿಚಾರಣಾ ಸಂಕಿರಣ, ಕವಿಗೋಷ್ಠಿ, ಕವಿ ಕಾವ್ಯ ಕುಂಚಗಾಯನ | 500000.00 |
| 14 | ಫಲಪುಷ್ಪ ಪ್ರದರ್ಶನ | 500000.00 |
| 15 | ಮಹಿಳೆಯರಿಗೆ ರಂಗೋಲಿ ಮೆಹಂದಿ ಸ್ಪರ್ಧೆ | 250000.00 |
| 16 | ಗ್ರಾಮೀಣ ಕ್ರೀಡೆಗಳು | 1000000.00 |
| 17 | ಕಿಡ್ಸ್ ಜೋನ್ | 250000.00 |
| 18 | ಕುದುರೆ ಜಿಗಿತ ಪ್ರದರ್ಶನ | 2000000.00 |

| | | |
|---|---|---|
| 19 | ವಿಜಯನಗರ ವೈಭವ ( ಧ್ವನಿ ಮತ್ತು ಬೆಳಕು ಕಾರ್ಯಕ್ರಮ) | 2600000.00 |
| 20 | ಡಾಗ್ ಶೋ | 250000.00 |
| 21 | 4 ವೇದಿಕೆಗಳಿಗೆ ಧ್ವನಿ ಮತ್ತು ಬೆಳಕು ವ್ಯವಸ್ಥೆ | 2500000.00 |
| 22 | ಸಾರ್ವಜನಿಕರಿಗೆ ಉಚಿತ ಬಸ್ ಸೌಲಭ್ಯ | 5000000.00 |
| 23 | ತಾತ್ಕಾಲಿಕ ರಸ್ತೆ, ಇತರೆ ಮೂಲಭೂತ ಸೌಲಭ್ಯಗಳಿಗೆ | 5000000.00 |
| 24 | ಕಲಾವಿದರಿಗೆ / ಗಣ್ಯರಿಗೆ ಊಟದ ವ್ಯವಸ್ಥೆ | 5000000.00 |
| 25 | ವಸತಿ ಮತ್ತು ಸಾರಿಗೆ ವ್ಯವಸ್ಥೆ | 3000000.00 |
| 26 | ಆಹ್ವಾನ ಪತ್ರಿಕೆ, ಬ್ಯಾನರ್, ಪ್ರಚಾರ, ಗುರುತಿನ ಚೀಟಿ, ಕರಪತ್ರ, ನೆನಪಿನ ಕಾಣಿ ಇತರೆ ಪ್ರಿಂಟಿಂಗ್ | 2500000.00 |
| 27 | ಮೀಡಿಯಾ ಸೆಂಟರ್, ಪೋಟೋ, ವೀಡಿಯೋ, ಜಾಹೀರಾತು | 4000000.00 |
| 28 | ವಿದ್ಯುತ್‌ಶಕ್ತಿ ಬಳಕೆ ಜೆಸ್ಕಾಂಗೆ ಶುಲ್ಕ ಪಾವತಿ | 2000000.00 |
| 29 | ವೇದಿಕೆಗಳ ಸಿವಿಲ್ ಕಾಮಗಾರಿಗಳು/ ಆಸನಗಳು/ ಬ್ಯಾರಿಕಾರ್ಡಿಂಗ್ / | 5000000.00 |
| 30 | ಏರಿಯಾ ಲೈಟಿಂಗ್, ತಾತ್ಕಾಲಿಕ ಜನರೇಟರ್, ಇತರೆ ತುರ್ತು ಕಾಮಗಾರಿಗಳು | 3400000.00 |
| ಒಟ್ಟಾರೆ ಮೊತ್ತ | | 80000000.00 |
| ಅಕ್ಷರಗಳಲ್ಲಿ ( ರೂಪಾಯಿ ಎಂಟು ಕೋಟಿಗಳು ಮಾತ್ರ) | | |

ಸಹಾಯಕ ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಳ್ಳಾರಿ

ಅನುಬಂಧ-2

# ಹಂಪಿ ಉತ್ಸವ – 2019 ರ ಕಾರ್ಯಕ್ರಮದ ರೂಪುರೇಷಗಳ ವಿವರ

| ಕ್ರಸಂ | ಕಾರ್ಯಕ್ರಮ | ವಿವರ |
|---|---|---|
| 1 | 4 ವೇದಿಕೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು | ವೇದಿಕೆಗಳಲ್ಲಿ ಸಂಜೆ 5.00 ಗಂಟೆಯಿಂದ ರಾತ್ರಿ 11.30 ಗಂಟೆಯವರೆಗೆ ವಿವಿಧ ವೇದಿಕೆಗಳಲ್ಲಿ ಸ್ಥಳೀಯ ಕಲಾವಿದರು, ರಾಜ್ಯದ ಇತರೆ ಜಿಲ್ಲೆಯ ಕಲಾವಿದರು, ಅಂತರರಾಷ್ಟ್ರೀಯ ಕಲಾವಿದರು ಅವರಿಂದ ಹಿಂದೂಸ್ತಾನಿ ಸಂಗೀತ ಗಾಯನ, ಸುಗಮ ಸಂಗೀತ, ಕರ್ನಾಟಕ ಸಂಗೀತ, ಜಾನಪದ ಗೀತೆಗಳು, ಸಮೂಹ ನೃತ್ಯ, ನೃತ್ಯ ರೂಪಕ, ಹಾಸ್ಯಗೋಷ್ಠಿ, ವಾದ್ಯ ಸಂಗೀತ, ನಮ್ಮ ಭಾರತೀಯ ಸಾಂಸ್ಕೃತಿಕ ವಿವಿಧ ಕಲಾ ಪ್ರಕಾರಗಳನ್ನೊಳಗೊಂಡ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. |
| 2 | ಶೋಭಯಾತ್ರೆ , ಜಾನಪದ ವಾಹಿನಿ | ಮೊದಲದಿನ ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದಿಂದ ನಂದಿಧ್ವಜಕ್ಕೆ ಪೂಜೆಯನ್ನು ಸಲ್ಲಿಸಿ ಸುಮಾರು 25 ಜಾನಪದ ಕಲಾತಂಡಗಳಿಂದ ಮೆರವಣಿಗೆ ಮೂಲಕ ಮುಖ್ಯ ವೇದಿಕೆಗೆ ತಲುಪಲಾಗುವುದು. ಮತ್ತು ಸುಮಾರು ಒಂದು ಸಾವಿರ ಮಹಿಳೆಯರಿಂದ ಪೂರ್ಣಕುಂಭಮೇಳವನ್ನು ಆಯೋಜಿಸಿ ಶೋಭಯಾತ್ರೆ ಮೂಲಕ ಕಾರ್ಯಕ್ರಮವನ್ನು ಆಯೋಜಿಸಲಾಗುವುದು. ನಂತರ ಕೊನೆಯ ದಿನ ಶ್ರೀ ಉದ್ಯಾನ ವೀರಭದ್ರ ದೇವಸ್ಥಾನದ ಮೂಲಕ ಶ್ರೀ ತಾಯಿ ಭುವನೇಶ್ವರಿ ಪೂಜೆಯನ್ನು ನೆರವೇರಿಸಿ ರಾಜ್ಯದ ಸುಮಾರು 50 ವಿವಿಧ ಜಾನಪದ ಕಲಾತಂಡಗಳಿಂದ ಜಾನಪದವಾಹಿನಿಯನ್ನು ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದವರೆಗೆ ಮೆರವಣಿಗೆಯನ್ನು ಆಯೋಜಿಸಲಾಗುತ್ತದೆ. |
| 3 | ಚಿತ್ರಕಲಾ ಶಿಬಿರ / ಪ್ರದರ್ಶನ | ಉತ್ಸವದ ಮೂರು ದಿನಗಳ ಮುಂಚಿತವಾಗಿ ಕರ್ನಾಟಕ ಲಲಿತ ಕಲಾ ಅಕಾಡೆಮಿ ಮತ್ತು ಜಿಲ್ಲಾಡಳಿತದ ಸಹಯೋಗದೊಂದಿಗೆ ರಾಜ್ಯ ಮತ್ತು ಸ್ಥಳೀಯ ಚಿತ್ರಕಲಾವಿದರಿಂದ ಹಂಪಿಯ ಭೌಗೋಳಿಕ , ಸ್ಮಾರಕ, ಪರಿಸರ ಸೃಜನಾತ್ಮಕ ಕುರಿತಂತೆ ಚಿತ್ರಕಲಾ ಶಿಬಿರವನ್ನು ಏರ್ಪಡಿಸಿ ರಚಿಸಲಾಗಿರುವ ಕಲಾಕೃತಿಗಳನ್ನು ಪ್ರದರ್ಶನಕ್ಕೆ ಅವಕಾಶಮಾಡಿಕೊಡಲಾಗುವುದು. |
| 4 | ಛಾಯಾಚಿತ್ರ ಸ್ಪರ್ಧೆ / ಪ್ರದರ್ಶನ | ಉತ್ಸವದ ಹತ್ತು ದಿನಗಳ ಮುಂಚಿತವಾಗಿ ಹಂಪಿಯ ಕುರಿತ ಛಾಯಾಚಿತ್ರಗಳನ್ನು ತೆಗೆದು ಸಲ್ಲಿಸಿದ ನಂತರ ಉತ್ತಮವಾದ ಛಾಯಾಚಿತ್ರಗಳಿಗೆ ಪ್ರಥಮ, ದ್ವಿತೀಯ, ತೃತೀಯ ಬಹುಮಾನಗಳನ್ನು ನೀಡಲಾಗುವುದು. ನಂತರ ಸ್ಪರ್ಧೆಗೆ ಕಳುಹಿಸಿಕೊಟ್ಟಿರುವ ಎಲ್ಲಾ ಛಾಯಾಚಿತ್ರಗಳನ್ನು ಪ್ರದರ್ಶಿಸಲಾಗುವುದು. |

| | | |
|---|---|---|
| 5 | ಗೋಡೆಬರಹ ಚಿತ್ರಕಲಾ ಉತ್ಸವ | ಹಂಪಿಯ ಕಮಲಾಪುರದ ಪುರಸಭೆ ವ್ಯಾಪ್ತಿ ಮತ್ತು ಹೊಸಪೇಟೆ ನಗರ ಸಭೆ ವ್ಯಾಪ್ತಿಯಲ್ಲಿ ಸರ್ಕಾರಿ ಕಛೇರಿಗಳು, ಶಾಲಾ ಕಾಲೇಜುಗಳ ಆವರಣದ ಗೋಡೆಗಳಲ್ಲಿ ಹಂಪಿ ಪಾರಂಪರಿಕ ಸ್ಮಾರಕಗಳ ಗೋಡೆಬರಹಗಳನ್ನು ನುರಿತ ಚಿತ್ರಕಲಾವಿದರಿಂದ ಬರಿಸಲಾಗುವುದು. |
| 6 | ತುಂಗಾ ಆರತಿ ಮಹೋತ್ಸವ | ಹಂಪಿಯ ಶ್ರೀ ವಿರೂಪಾಕ್ಷೇಶವರ ದೇವಸ್ಥಾನದ ಪಕ್ಕದಲ್ಲಿರುವ ತುಂಗಾಭದ್ರ ನದಿಯ ತೀರದಲ್ಲಿ ಸಾಂಪ್ರಾದಾಯಿಕವಾಗಿ ಶ್ರೀ ಶ್ರೀ ಶ್ರೀ ವಿದ್ಯಾರಣ್ಯಾ ಸ್ವಾಮೀಜಿಗಳಿಂದ ಪೂಜಾ ವಿಧಾನಗಳನ್ನು ನೆರವೇರಿಸಿ ಸಾರ್ವಜನಿಕರು ಹಾಗೂ ಭಕ್ತರಿಂದ ದೀಪೋತ್ಸವದ ಮೂಲಕ ತುಂಗಾ ಆರತಿ ಮಹೋತ್ಸವವನ್ನು ಏರ್ಪಡಿಸಲಾಗುತ್ತದೆ. |
| 7 | ಪಾರಂಪರಿಕ ನಡಿಗೆ | ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದಿಂದ ವಿವಿದ ಕಾಲೇಜು ವಿದ್ಯಾರ್ಥಿಗಳು, ಪ್ರವಾಸಿಗರಿಂದ ಹಾಗೂ ಮಾರ್ಗದರ್ಶಕರು (ಗೈಡ್ಸ್) ಅವರಿಂದ ಹಂಪಿಯ ವಿವಿಧ ಸ್ಮಾರಕಗಳ ಮೂಲಕ ಕಾಲ್ನಡಿಗೆಯಿಂದ ಪ್ರವಾಸೋದ್ಯಮವನ್ನು ಉತ್ತೇಜಿಸಲು ಘೋಷಾವಾಕ್ಯಗಳೊಂದಿಗೆ ಪಾರಂಪರಿಕ ನಡಿಗೆಯನ್ನು ಏರ್ಪಡಿಸಲಾಗುತ್ತದೆ. |
| 8 | ಸೈಕಲ್ ಜಾಥಾ | ಹೊಸಪೇಟೆ ನಗರದಿಂದ ಹಂಪಿಯ ಗತವೈಭವದ ಸಾಂಸ್ಕೃತಿಕ ಮೆರಗನ್ನು ಕುರಿತು ಮತ್ತು ಪ್ರವಾಸೋದ್ಯಮ ಉತ್ತೇಜನ ನೀಡಲು ಪ್ರಚಾರದ ಮೂಲಕ ಸೈಕಲ್‌ನಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿಯೊಂದಿಗೆ ಹಂಪಿಯ ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದವರೆಗೆ ಜಾಥಾವನ್ನು ಏರ್ಪಡಿಸಲಾಗುವುದು. |
| 9 | ಹಂಪಿ ಬೈ ಸ್ಕೈ | ಕಮಲಾಪುರದಿಂದ ಹೆಲಿಕಾಪ್ಟರ್ ಮೂಲಕ ಆಗಸದಲ್ಲಿ ಹಂಪಿ ವೀಕ್ಷಣೆಯನ್ನು ನೋಡಲು ಒಂದು ವಿನೂತನ ಕಾರ್ಯಕ್ರಮ. ಆಗಸದಲ್ಲಿ ಇಡೀ ಹಂಪಿಯ ಗುಡಿ ಗೋಪುರಗಳು, ಸ್ಮಾರಕಗಳನ್ನು ಕಣ್ತುಂಬ ನೋಡಲು ಒಂದು ಸುವರ್ಣಾವಕಾಶ. |
| 10 | ಹಂಪಿ ಬೈ ಬೈಕ್‌ರ್‍ಯಾಲಿ | ಹೊಸಪೇಟೆ ನಗರದಿಂದ ಹಂಪಿಯ ಗತವೈಭವದ ಸಾಂಸ್ಕೃತಿಕ ಮೆರಗನ್ನು ಕುರಿತು ಮತ್ತು ಪ್ರವಾಸೋದ್ಯಮ ಉತ್ತೇಜನ ನೀಡಲು ಪ್ರಚಾರದ ಮೂಲಕ ಬೈಕ್ ರ್‍ಯಾಲಿಯನ್ನು ಹಂಪಿಯ ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದವರೆಗೆ ಜಾಥಾವನ್ನು ಏರ್ಪಡಿಸಲಾಗುವುದು. |

| | | |
|---|---|---|
| 11 | ಕೈಗಾರಿಕಾ, ಕೃಷಿ, ಕರಕುಶಲ ಪ್ರದರ್ಶನ / ಆಹಾರ ಮೇಳ/ ಪುಸ್ತಕ ಮೇಳ ಮಳಿಗೆಗಳ ನಿರ್ಮಾಣ | ರಾಜ್ಯದ ಜಿಲ್ಲೆಯ ಕೈಗಾರಿಕಾ ಮತ್ತು ಕೃಷಿ ಸಲಕರಣೆಗಳು, ಕರಕುಶಲ, ಕೈಮಗ್ಗ, ಇತರ ಪ್ರದರ್ಶನಗಳು ವಿವಿಧ ತಿನಿಸುಗಳ ಆಹಾರಮೇಳ ಮತ್ತು ಪುಸ್ತಕ ಮೇಳಗಳನ್ನು ಪ್ರದರ್ಶನ ಏರ್ಪಡಿಸಲಾಗುವುದು. |
| 12 | ರೈತರ ವಿಚಾರಣ ಸಂಕಿರಣ, ಕವಿಗೋಷ್ಠಿ, ಕವಿ ಕಾವ್ಯ ಕುಂಚಗಾಯನ | ರೈತರ ಬೆಳೆ, ಫಸಲು, ಕ್ರಮಗಳ ಕುರಿತು ವಿಚಾರಗೋಷ್ಠಿ, ಕಾವ್ಯವಾಚನ, ಗಾಯನ, ಚಿತ್ರಕಲೆ ಮೂಲಕ ಕಾರ್ಯಕ್ರಮವನ್ನು ಏರ್ಪಡಿಸಲಾಗುವುದು. |
| 13 | ಫಲಪುಷ್ಪ ಪ್ರದರ್ಶನ | ಹಂಪಿಯ ಸ್ಮಾರಕಗಳು ಹಾಗೂ ಜಿಲ್ಲೆಯ ಇತರೆ ಸಾಂಸ್ಕೃತಿಕ ವೈಭವವನ್ನು ಹೊಂದಿರುವಂತಹಗಳನ್ನು ಫಲ ಮತ್ತು ಪುಷ್ಪಗಳೊದಿಗೆ ರಚನೆ ಮಾಡಿ ಪ್ರದರ್ಶಿಸಲಾಗುವುದು. |
| 14 | ಮಹಿಳೆಯರಿಗೆ ರಂಗೋಲಿ ಮೆಹಂದಿ ಸ್ಪರ್ಧೆ | ಮಹಿಳೆಯರಿಗಾಗಿ ರಂಗೋಲಿ ಮತ್ತು ಮೆಹಂದಿ ಸ್ಪರ್ಧೆಗಳನ್ನು ಏರ್ಪಡಿಸಲಾಗುವುದು. |
| 15 | ಗ್ರಾಮೀಣ ಕ್ರೀಡೆಗಳು | ಗ್ರಾಮೀಣ ಕ್ರೀಡೆಗಳಾದ ಮಲಗಂಭ, ಗುಂಡು ಎತ್ತುವುದು, ಕಬ್ಬಡಿ, ಕುಸ್ತಿ, ಬಂಡಿ ಚಕ್ರ ಎತ್ತುವುದು ಇತರೆ ಗ್ರಾಮೀಣ ಕ್ರೀಡೆಗಳನ್ನು ಏರ್ಪಡಿಸಲಾಗುವುದು. |
| 16 | ಕಿಡ್ಸ್ ಜೋನ್ | ಮಕ್ಕಳಿಗಾಗಿ ಜೋಕಾಲಿ, ಜಾರಬಂಡೆ, ಇತೀಚಿನ ಆಧುನಿಕ ಮಕ್ಕಳ ಮನರಂಜನೆಗಾಗಿ ಕಿಡ್ಸ್‌ಜೋನ್ ಏರ್ಪಡಿಸಲಾಗುವುದು. |
| 17 | ಕುದುರೆ ಜಿಗಿತ ಪ್ರದರ್ಶನ | ರಾಜ್ಯದ ಇತರೆ ಜಿಲ್ಲೆಗಳಿಂದ ಕುದುರೆ ಸವಾರಿ ಮತ್ತು ಕುದುರೆ ಜಿಗಿತ ಕಾರ್ಯಕ್ರಮಗಳನ್ನು ಏರ್ಪಡಿಸುವುದು. |
| 18 | ವಿಜಯನಗರ ವೈಭವ ( ಧ್ವನಿ ಮತ್ತು ಬೆಳಕು ಕಾರ್ಯಕ್ರಮ) | ಕೇಂದ್ರ ಸರ್ಕಾರದ ವಾರ್ತಾ ಮತ್ತು ಪ್ರಚಾರ ಸಚಿವಾಲಯದ ಸಂಗೀತ ಮತ್ತು ನಾಟಕ ವಿಭಾಗದಿಂದ ಇಜಯನಗರ ವೈಭವ ಧ್ವನಿ ಮತ್ತು ಬೆಳಕು ಕಾರ್ಯಕ್ರಮಗಳನ್ನ ಆನೆಸಾಲು ಆವರಣದಲ್ಲಿ ಒಂಭತ್ತು ದಿನ ಸ್ಥಳೀಯ ಕಲಾವಿದರನ್ನು ಆಯ್ಕೆ ಮಾಡಿಕೊಂಡು ತರಬೇತಿ ನೀಡಿ ವಿನೂತನ ಧ್ವನಿ ಮತ್ತು ಬೆಳಕು ಕಾರ್ಯಕ್ರಮವನ್ನು ಏರ್ಪಡಿಸಲಾಗುವುದು. |
| 19 | ಡಾಗ್ ಶೋ | ಹೊಸಪೇಟೆ ನಗರದಲ್ಲಿ ಜಿಲ್ಲೆಯ ವಿವಿಧ ಶ್ವಾನಗಳ ಪ್ರದರ್ಶನವನ್ನು ಏರ್ಪಡಿಸಿ ಉತ್ತಮ ಶ್ವಾನಗಳಿಗೆ ಬಹುಮಾನಗಳನ್ನು ನೀಡುವುದು. |

ಸಹಾಯಕ ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಳ್ಳಾರಿ

[redacted] ಹಂಪಿ ಉತ್ಸವಕ್ಕಾಗಿ ಕಳೆದ 5 ವರ್ಷಗಳಲ್ಲಿ ಸರ್ಕಾರ ಬಿಡುಗಡೆ ಮಾಡಿದ ಮೊತ್ತದ ವಿವರ

| ಕ್ರ.ಸಂ | ವರ್ಷ | ಇಲಾಖೆಯ ಕ್ರೀಯಾಯೋಜನೆಯಲ್ಲಿ ಅವಕಾಶ ಮಾಡಿಕೊಂಡ ಅನುದಾನ | ಹೆಚ್ಚುವರಿ ಬಿಡುಗಡೆಯಾದ ಅನುದಾನ | ಇಲಾಖೆಯಿಂದ ಬಿಡುಗಡೆಯಾದ ಒಟ್ಟು ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕೋಟಿಗಳಲ್ಲಿ) | ಪ್ರವಾಸೋದ್ಯಮ ಇಲಾಖೆ (ಕೋಟಿಗಳಲ್ಲಿ) | ಒಟ್ಟು (ಕೋಟಿಗಳಲ್ಲಿ) | ಏರ್ಪಡಿಸಿದ ದಿನಾಂಕ |
|---|---|---|---|---|---|---|---|
| 1 | 2013-14 | 1.00 | 0.75 | 1.75 | 0.25 | 2.00 | 2014 ರ ಜನವರಿ 10, 11 ಮತ್ತು 12 |
| 2 | 2014-15 | 2.00 | – | 2.00 | 0.50 | 2.50 | 2015 ರ ಜನವರಿ 9, 10 ಮತ್ತು 11 |
| 3 | 2015-16 | 1.00 | – | 1.00 | 0.00 | 1.00 | ಬರಗಾಲ ನಿಮಿತ್ತ ಆಚರಿಸಿರುವುದಿಲ್ಲ. |
| 4 | 2016-17 | 1.00 | 2.00 | 1.00 ಕಳೆದ ವರ್ಷದ ಅನುದಾನ **3.00** | 1.00 | 5.00 | 2016 ರ ನವಂಬರ್ 3, 4 ಮತ್ತು 5 |
| 5 | 2017-18 | 1.00 | 8.00 | 9.00 | 1.50 | 10.50 | 2017 ರ ನವಂಬರ್ 3, 4 ಮತ್ತು 5 |
| ಒಟ್ಟು ಮೊತ್ತ | | **6.00** | **10.75** | **16.75** | **3.25** | **21.00** | |

ಟಿಪ್ಪಣಿ: ಹಂಪಿ ಉತ್ಸವಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಕಳೆದ 5 ವಷಗಳಲ್ಲಿ ಒಟ್ಟಾರೆ 16.75 ಕೋಟಿ ಬಿಡುಗಡೆಮಾಡಲಾಗಿದೆ.